ಕೆಲವು ವರ್ಷಗಳಿಂದ ಸರಕಾರಿ ಆಬಾವಿನ ಜಮೀನಾನ ಸುಮಾರು ೧–೫೦ ಎಕರೆ ಅತಿಕ್ರಮಣ ಮಾಡಿ, ವಾಸ್ತವಿಸಿಕೊಂಡು ಬರುತ್ತಿದ್ದಾರೆ. ವಾಸ್ತವ್ಯದ ಜೊತೆ ಕೃಷಿ ಸಹ ಮಾಡಿರುತ್ತಾರೆ. ಸದ್ರಿಯವರು ಬಡವರಾಗಿದ್ದು ಹಿಂದುಳಿದ ಜನಾಂಗದವರಾಗಿದ್ದು, ಕೃಷಿ ಕೂಲಿ ಕೆಲಸ ಮಾಡಿ ಜೀವಿಸಿಕೊಂಡು ಬರುತ್ತಿರುವವರಾಗಿರುತ್ತಾರೆ. ಸದರಿಯವರು ಕೆಲವು ಮೈಲುಗಳ ದೂರ ಕೂಲಿ ಕೆಲಸವನ್ನು ಹುಡುಕಿ ಜೀವಿಸಿಕೊಂಡು ಬರುವವರಾಗಿದ್ದು, ಇವರ ಪತ್ನಿಯನ್ನು ಹೆರಿಗೆಗೆ ತವರು ಮನೆಗೆ ಕಳುಹಿಸಿದ ಸಂದರ್ಭದಲ್ಲಿ ವಿಜಯನ್ ಎಂಬುವರು ಕೆಲಸಕ್ಕೆ ಹೊರಗಡೆ ಹೋದಾಗ, ಸದ್ರಿಯವರು ಮನೆಗೆ ಹಗಲಿನಲ್ಲಿ ಅದೇ ಗ್ರಾಮದ ಶ್ರೀ ಮಾದಪ್ಪಗೌಡ ಎಂಬುವರ ಅತ್ತೆ ಮಾವನನ್ನು ಬಲಾತ್ಕಾರವಾಗಿ ಪ್ರವೇಶ ಮಾಡಿಸಿರುತ್ತಾರೆ. ಶ್ರೀ ವಿಜಯನ್ ಎಂಬುವರು ಸಂಜೆ ಮನೆ ಕಡೆ ಬಂದಾಗ ಇವರ ಮನೆಯಲ್ಲಿ ಬೇರೆಯವರು ಒಕ್ಕಲು ಆಗಿರುವುದರಿಂದ ಗಾಬರಿಯಾಗಿ ಬೊಬ್ಬೆ ಹಾಕಿದಾಗ, ಊರಿನವರು ಬಂದು ನೋಡಿದಾಗ ಮಾದಪ್ಪಗೌಡರು ಇವರ ಅತ್ತೆ ಮಾವನನ್ನು ಮನೆಗೆ ನುಗ್ಗಿಸಿದ್ದು ತಿಳಿದು ಬಂತು. ಈ ಸಮಯದಲ್ಲಿ ಊರಿನವರಿಗೂ ಮಾದಪ್ಪಗೌಡರಿಗೂ ಗಲಾಟೆ ನಡೆಯಿತು. ಈ ಗಲಾಟೆಯಿಂದ ಮಾದಪ್ಪಗೌಡರಿಗೆ ಸ್ವಲ್ಪ ಗಾಯವಾಗಿರುವುದು ತಿಳಿದು ಬಂದಿರುತ್ತದೆ. ಹೀಗಿರುವಾಗ ಕಡಪ ಆರಕ್ಷಕ ಠಾಣಾ ಉಪ ನಿರೀಕ್ಷಕರಾದ ಶ್ರೀ ಮೋಹನ್ ಎಂಬುವರು ಹಗಲು ದರೋಡೆ ಮಾಡಿ, ಬೇರೆಯವರ ಮನೆಗೆ ಬಲಾತ್ಕಾರ ಪ್ರವೇಶ ಮಾಡಿದ ಶ್ರೀ ಮಾದಪ್ಪಗೌಡ ಎಂಬುವರಿಗೆ ಹೆಣದ ಬಲದಿಂದ ಸಂಪೂರ್ಣ ರಕ್ಷಣೆ ನೀಡಿ, ಬಡವನಾದ, ನಿಜವಾದ ನಿವಾಸಿ ಶ್ರೀ ವಿಜಯನ್‌ರವರಿಗೆ ರಕ್ಷಣೆ ನೀಡದೆ, ಮನೆಯನ್ನು ಬಿಟ್ಟುಕೊಡುವ ವ್ಯವಸ್ಥೆ ಮಾಡದೇ ವಿಜಯನ್‌ರವರ ಮನೆ ತೆರಿಗೆ ರಶೀದಿ, ಹಸಿರು ಕಾರ್ಡ್ ಇವುಗಳನ್ನು ಠಾಣೆಯಲ್ಲಿ ಇರಿಸಿ, ನೀನು ಊರು ಬಿಟ್ಟು ಹೋಗದಿದ್ದಲ್ಲಿ ನಿನ್ನ ಕೈಕಾಲು ಮುರಿದು ಹಾಕುತ್ತೇನೆ ಎಂದು ಬೆದರಿಕೆ ಹಾಕಿರುತ್ತಾರೆ ಎಂದು ತಿಳಿದು ಬರುತ್ತದೆ. ಆದುದರಿಂದ, ಕಂದಾಯ ಇಲಾಖೆಯಿಂದ ಬಡ ಅತಿಕ್ರಮ ಜಮೀನಂದಾರನಿಗೆ ಕೃಷಿ ಮಾಡಿದ ಜಮೀನನ್ನು ನೀಡುವಂತೆ ವ್ಯವಸ್ಥೆ ಮಾಡುವುದಲ್ಲದೆ ಕಡಪ ಆರಕ್ಷಣ ಠಾಣಾ ಉಪ ನೀರಿಕ್ಷಕರಿಂದ ವಿಜಯನ್‌ರವರಿಗೆ ಆದ ಅನ್ಯಾಯವನ್ನು ಪರಿಶೀಲಿಸಿ, ಇವರಿಗೆ ರಕ್ಷಣೆ ನೀಡುವಂತೆ ಕ್ರಮ ಕೈಗೊಳ್ಳಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಸದನದ ಮುಂದಿರುವ ಭೂ ಸುಧಾರಣಾ ಕಾಯಿದೆ ಸೆಕ್ಷನ್ ೮೪ರ ತಿದ್ದುಪಡಿ ಮಸೂದೆ ಪಾಸ್ ಆದ ನಂತರದ ಇದರ ಬಗ್ಗೆ ಕ್ರಮ ಕೈಗೊಳ್ಳುತ್ತೇನೆ.

೧೬) ರಾಯಚೂರಿನ ನಿಜಲಿಂಗಪ್ಪ ನಗರದಲ್ಲಿ ವಾಸವಾಗಿರುವ ಮಾಜಿ ಮಂತ್ರಿ ಬಿ. ಶಿವಣ್ಣ ಅವರ ಮನೆಯಲ್ಲಿ ಭಾರಿ ಕಳ್ಳತನವಾಗಿರುವುದು.

ಶ್ರೀ ಜಿ. ರಾಮಕೃಷ್ಣ.—ಮಾನ್ಯ ಅಧ್ಯಕ್ಷರೇ, ರಾಯಚೂರಿನ ನಿಜಲಿಂಗಪ್ಪ ನಗರದಲ್ಲಿ ಕೆ. ಹೆಚ್, ಬಿ. ಕಾಲೋನಿಯ ೧೫೯ನೇ ಮನೆಯಲ್ಲಿರುವ ಮಾಜಿ ಮಂತ್ರಿ ಶ್ರೀ ಬಿ. ಶಿವಣ್ಣ ಅವರ ಮನೆಯಲ್ಲಿ ೧೯೮೫ ರಿಂದ ಈವರೆಗೆ ೪ ಭಾರಿ ಕಳ್ಳತನವಾಗಿದ್ದು, ಇದುವರೆಗೆ ಅಪರಾಧಿಗಳನ್ನು ಪತ್ತೆ ಹಚ್ಚಿರುವುದಿಲ್ಲ. ಶ್ರೀ ಶಿವಣ್ಣ ಅವರು ಈ ಕಳ್ಳತನದಿಂದಾಗಿ ನಗದು ಹಾಗೂ ಒಡವೆ ವಸ್ತುಗಳ ಮೂಲಕ ಸಹಸ್ರಾರು ರೂಪಾಯಿಗಳನ್ನು ಕಳೆದುಕೊಂಡಿದ್ದಾರೆ. ಅಲ್ಲದೆ ಮನೆಯ ಕಿಟಕಿ ಬಾಗಿಲುಗಳನ್ನು ಕೂಡ ಮುರಿದು ಹಾಕಲಾಗಿದೆ. ಈ ರೀತಿ ಪದೇ ಪದೇ ಕಳ್ಳತನಗಳಾಗುತ್ತಿದ್ದಾಗ್ಲೂ ಈ ಬಗ್ಗೆ ಪೋಲೀಸಿನವರು ಯಾವುದೇ ಕ್ರಮವನ್ನು ಕೈಕೊಳ್ಳದೆ, ಕರ್ತವ್ಯ ನಿರ್ವಹಿಸುವಲ್ಲಿ ವಿಫಲರಾಗಿದ್ದಾರೆ. ಮಾನ್ಯ ಶಿವಣ್ಣ ಅವರು ಈ ಬಗ್ಗೆ ಪೋಲೀಸರಿಗೆ ಅಷ್ಟೇ ಅಲ್ಲದೆ ಸನ್ಮಾನ್ಯ ರಾಜ್ಯಪಾಲರವರಿಗೂ ಅವರು ಗೃಹ ಮಂತ್ರಿಗಳಾಗಿದ್ದಾಗ ಸ್ವತಃ ಪತ್ರ ಬರೆದು ತಿಳಿಸಿ, ಈ ಬಗ್ಗೆ ಪೂರ್ಣ ವ್ಯವಸ್ಥೆ ಮಾಡಬೇಕೆಂದು ಕೋರಿದ್ದಾರೆ. ಆದಾದ ನಂತರ ೩ ಬಾರಿ ಕಳ್ಳತನವಾಗಿರುವುದನ್ನು ನೋಡಿದಲ್ಲಿ ಪೋಲೀಸರ ನಿಷ್ಕ್ರಿಯತೆ ಇಲ್ಲಿ ಎದ್ದು ಕಾಣುತ್ತದೆ. ಆದ್ದರಿಂದ ಸರಕಾರದ ಹಾಗೂ ಪೋಲೀಸಿನವರ ಈ ನಿಷ್ಕ್ರಿಯ ಧೋರಣೆಯನ್ನು ಖಂಡಿಸಿ ಕರ್ತವ್ಯ ವಿಮುಖರಾಗಿರುವ ಪೋಲೀಸಿನವರ ಮೇಲೆ ಕ್ರಮ ಕೈಗೊಳ್ಳುವ ಬಗ್ಗೆ ಈ ಸದನಕ್ಕೆ ಹೇಳಿಕೆ ನೀಡಬೇಕೆಂದು ಮುಖ್ಯ ಮಂತ್ರಿಗಳನ್ನು ಒತ್ತಾಯಿಸುತ್ತೇನೆ.

ಶ್ರೀ ಧರ್ಮಸಿಂಗ್.–ಇದು ಮೊದಲನೇ ಸಲ ಅಲ್ಲ ನಡೆಯುತ್ತಿರುವುದು, ಎನೇ ಸಲ, ಆದುದರಿಂದ ಕೂಡಲೇ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ವೀರಣ್ಣ.–ನಾನು ಮೇಲ್ಮನೆಯಲ್ಲಿ ಈ ವಿಷಯ ಪ್ರಸ್ತಾಪವಾದಾಗ ಇದರ ಬಗ್ಗೆ ಕ್ರಮ ಕೈಗೊಳ್ಳುತ್ತೇನೆಂದು ತಿಳಿಸಿದ್ದೆ, ಅದನ್ನು ಮತ್ತೆ ಇಲ್ಲಿ ಹೇಳುವ ಅವಶ್ಯಕತೆ ಇಲ್ಲವೆಂದು ತಿಳಿದಿದ್ದೆ. ಆದರೂ ಸಹ ನಾನು ಈ ಬಗ್ಗೆ ಹೇಳಿಕೆಯನ್ನು ಮುಂಖ್ಯ ಮಂತ್ರಿಯವರ ಪರವಾಗಿ ಮಾಡುತ್ತೇನೆ.

ಶ್ರೀಯುತ ಬಿ. ಶಿವಣ್ಣ.–ಮಾಜಿ ಮಂತ್ರಿಗಳು, ರಾಯಚೂರಿನ ರೈಲ್ವೆ ಹಳ್ಳಿಯ ಪಕ್ಕದಲ್ಲಿ ಹೊರಭಾಗದಲ್ಲಿರುವ ನಿಜಲಿಂಗಪ್ಪ ಕಾಲೋನಿಯಲ್ಲಿರುವ ಒಂಟಿ ಮನೆಯಲ್ಲಿ ಒಬ್ಬಂಟಿಗರಾಗಿ ವಾಸವಾಗಿದ್ದು ಆನೇಕ ವೇಳೆ ಮನೆಗೆ ಬೀಗ ಹಾಕಿ ಹಲವಾರು ದಿನ ಹೊರಗಡೆ ಪ್ರವಾಸಕ್ಕೆ ಹೋಗಿರುವಾಗ ಕಳ್ಳತನಗಳು ನಡೆದಿವೆ.

ಶ್ರೀಯುತ ಬಿ. ಶಿವಣ್ಣ ಇವರ ಮನೆಯಲ್ಲಿ ಕೆಳಕಂಡ ನಾಲ್ಕು ಕಳ್ಳತನಗಳು ೧೯೮೫ ರಿಂದ ಈಚೆಗೆ ನಡೆದಿವೆ.

೧. ದಿನಾಂಕ ೨೧–೫–೮೫ರ ರಾತ್ರಿ ಸುಮಾರು ೩,೧೫೦ ರೂ. ಬೆಲೆ ಬಾಳುವ ವಸ್ತುಗಳು,

೨. ದಿನಾಂಕ ೨೬–೧೦–೮೭ರ ರಾತ್ರಿ ಚಿನ್ನದ ಉಂಗುರ, ಸರ ಮುಂತಾದವು ಸೇರಿ ೪,೬೫೦ ರೂ. ಬೆಲೆ ಬಾಳುವ ವಸ್ತುಗಳು,

೩. ದಿನಾಂಕ ೩೧–೧–೮೭ರ ರಾತ್ರಿ ಒಂದು ರೋಲೆಕ್ಸ್ ಕೈಗಡಿಯಾರ, ರೇಡಿಯೋ ಮುಂತಾದವು ಸೇರಿ ಸುಮಾರು ೩,೩೪೦ ಬೆಲೆ ಬಾಳುವ ವಸ್ತುಗಳು, ಮತ್ತು,

೪. ದಿನಾಂಕ ೧೬–೫–೮೮ರ ರಾತ್ರಿ ೬೯೦–೦೦ ರೂ. ನಗದು ಹಣ.

ಕಳ್ಳರು ಈ ಎಲ್ಲಾ ಕಳ್ಳತನಗಳನ್ನು ಮನೆಯಗೋಡೆಯ ಮೇಲೆ ಹತ್ತಿ ಹಿಂದಂಗಡೆ ಬಾಗಿಲನ್ನು ಅಥವಾ ಬೀಗವನ್ನು ಮುರಿದು ಮಾಡಿರುತ್ತಾರೆ. ಇದುವರೆಗೆ ಕಳ್ಳತನದ ಯಾವುದೇ ವಸ್ತುಗಳು ಪತ್ತೆಯಾಗಿಲ್ಲ ಮೊದಲ ಮೂರು ಕಳ್ಳತನಗಳನ್ನು ಪತ್ತೆಯಾಗದ ಪ್ರಕರಣಗಳು ಎಂದು ಸಧ್ಯಕ್ಕೆ ಅಂತ್ಯಗೊಳಿಸಲಾಗಿದೆ ದಿನಾಂಕ ೧೬–೫–೮೮ರಂದು ನಡೆದ ಕಳ್ಳತನದ ಪ್ರಕರಣವನ್ನು ರಾಯಚೂರಿನ ಡೆಪ್ಯುಟಿ ಪೋಲೀಸ್ ಸೂಪರಿಂಟೆಂಡೆಂಟ್ ಅವರೆ ಮೇಲ್ವಿಚಾರಣೆಯಲ್ಲಿ ತನಿಖೆ ನಡೆಸಲಾಗಿತ್ತಿದೆ. ಇದರ ಬಗ್ಗೆ ಸ್ಥಳೀಯ ಹಾಗು ಹೊರಗಡೆಯ ಗುಮಾನಿ ಆಸಾಮಿಗಳ ಬಗ್ಗೆಯೂ ವಿಚಾರಣೆ ಮಾಡಲಾಗಿತ್ತಿದೆ. ಆದರೆ ಇದುವರೆಗೆ ಯಾವ ಸುಳಿವೂ ಸಿಕ್ಕಿಲ್ಲ.

ಈಗ ಶ್ರೀಯುತ ಬಿ ಶಿವಣ್ಣ ಅವರ ಮನೆ ಸುತ್ತಮುತ್ತಲು ಸದಾ ಕಾಲ ಗಸ್ತಿನ ಏರ್ಪಾಡು ಮಾಡಲಾಗಿದೆ. ಇದಲ್ಲದೆ ರಾತ್ರಿ ಗಸ್ತಿನ ಹಿರಿಯ ಅಧಿಕಾರಿಗಳು ಇವರ ಮನೆಗೆ ಆಗಿಂದಾಗ್ಗೆ ಭೇಟಿ ಕೊಡುತ್ತಿರುತ್ತಾರೆ. ಮುಂಜಾಗ್ರತಾ ಕ್ರಮಗಳನ್ನು ಚುರುಕುಗೊಳಿಸಲಾಗಿದೆ.

೧೨-೦೦ ಪಿ.ಎಂ.

ಮಾನ್ಯ ಅಧ್ಯಕ್ಷರೇ, ಇದರ ಜೊತೆಗೆ ಇನ್ನೂ ಒಂದು ಬಾತನ್ನು ಹೇಳುತ್ತೇನೆ. ಏನೆಂದರೆ, ಅಲ್ಲಿಯ ಹೌಸಿಂಗ್ ಬೋರ್ಡ್ ಡಿಪಾರ್ಟ್‌ಮೆಂಟ್‌ನಲ್ಲಿರತಕ್ಕಂಥ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್ ಅವರನ್ನು ಈ ಬಗ್ಗೆ ವಿಚಾರಣೆ ಮಾಡಿದರೆ ಸುಳಿವು ಸಿಗುತ್ತಿತ್ತು ಆದರೆ ಈ ಪ್ರಕರಣ ನಡೆದ ೨೫ ದಿವಸಗಳಲ್ಲಿಯೇ ಅವರನ್ನು ಅಲ್ಲಿಂದ ವರ್ಗ ಮಾಡಿದರು ಎಂದು ಮೇಲ್ಮನೆಯ ಮಾನ್ಯ ಕಲ್ಮಣ್‌ಕರ್ ಅವರು ಹೇಳಿದ ಮೇಲೆ, ಈಗ ಅವರು ಎತ್ತಿಯೇ ಇರಲಿ, ಅವರ ಹತ್ತಿರಹೋಗಿ ವಿಚಾರಣೆ ಮಾಡಿಸಿ ಕೂಡಲೇ ಕ್ರಮ ಕೈಗೊಳ್ಳುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದೇನೆ. ಇದರ ಪ್ರಕಾರ ನಾನು ಈಗಾಗಲೇ ಆ ಜಿಲ್ಲೆಯ ಪೋಲೀಸ್ ಸೂಪರಿಂಟೆಂಡೆಂಟ್ ಅವರಿಗೆ ಆದೇಶ ಕೊಟ್ಟಿದ್ದೇನೆ. ಏನೆಂದರೆ ಈ ಅಸಿಸ್ಟೆಂಟ್ ಎಕ್ಸಿಕ್ಯುಟೀವ್ ಇಂಜಿನಿಯರ್ ಅವರು ಇರುವ ಸ್ಥಳಕ್ಕೆ ಹೋಗಿ ಅವರಿಂದ ಈ ಬಗ್ಗೆ ಬೇಕಾಗುವಂತಹ ಎಲ್ಲಾ ರೀತಿಯಲ್ಲಿ ಮಾಹಿತಿಗಳನ್ನು ತೆಗೆದುಕೊಂಡು ಸಂಬಂಧಪಟ್ಟವರ ಮೇಲೆ ನಿರ್ದಾಕ್ಷಿಣ್ಯವಾದಂಥ ಕ್ರಮವನ್ನು ಕೈಕೊಳ್ಳಬೇಕೆಂದು ಈಗಾಗಲೇ ತಿಳಿಸಿದ್ದೇನೆ.

ಶ್ರೀ ಧರ್ಮಸಿಂಗ್.— ಈ ರೀತಿ ನಡೆದಿರುವುದು ನಾಲ್ಕನೆಯ ಸಲ ಆದ್ದರಿಂದ.....

ಅಧ್ಯಕ್ಷರು.— ತಾವು ಒಬ್ಬರು ಸದಸ್ಯರಿದ್ದೀರಿ. ಇದರ ಮೇಲೆ ಚರ್ಚೆಗೆ ಅವಕಾಶ ಇಲ್ಲ ಎಂಬುದು ತಮಗೂ ಸಹ ಗೊತ್ತಿದೆ. ಈಗ ತಾವು ಏನೇ ಹೇಳಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ. ಆದ್ದರಿಂದ ದಯವಾಡಿ ತಾವು ಕುಳಿತುಕೊಳ್ಳಿ.

## ೧೭) ಕರ್ನಾಟಕ ನಗರ ನೀರು ಸರಬರಾಜು ಮಂತ್ತು ಒಳಚರಂಡಿ ಮಂಡಳಿಯ ನೌಕರರು ತಮ್ಮ ಬೇಡಿಕೆಗಾಗಿ ಮುಷ್ಕರ ಹೂಡಿರುವುದು

SRI T. S. MANI.—Sir, K.U.W.S. & B.B. employees Association has given a strike notice to the Board and to the H.U.D. Department to go on indefinite strike from 23-6-1988 and also to call for Water Bundh. Thousands of K.U.W.S. & B.B. employees will come over to Bangalore on 15-6-1988 to press their demands.

What is the action initiated by the Government to resolve the issue?

SRI A. LAKSHMISAGAR.— The demand notice of the employees of the K.U.W.S & B.B. union has been received, and the Chairman of the K.U.W S & B.B. has called a general meeting of the M.D. and representatives of the employees Association on 21-6-1988 in the chambers of the Chairman to discuss the employees' demands and resolve the issue suitably.

## ವಿತ್ತೀಯ ಕಾರ್ಯಕಲಾಪಗಳು

### ೧೯೮೮-೮೯ನೇ ಸಾಲಿಗೆ ಸಂಬಂಧಿಸಿದ ಅನುದಾನಗಳ ಬೇಡಿಕೆಗಳ ಮೇಲಿನ ಚರ್ಚೆ

ಅಧ್ಯಕ್ಷರು.— ಈಗ ಅನುದಾನ ಬೇಡಿಕೆಗಳ ಮೇಲೆ ಚರ್ಚೆ ಮುಂದುವರಿಯುತ್ತದೆ. ಈ ಬೇಡಿಕೆಗಳ ಮೇಲೆ ಮಾತನಾಡುವವರು ಇನ್ನೂ ೨೩ ಜನಸದಸ್ಯರಿದ್ದಾರೆ. ಇವರಲ್ಲಿ ಕೆಲವರು ಗೈರುಹಾಜರಾಗಿದ್ದರೂ ಸಹ ಎಲ್ಲರೂ ಮಾತನಾಡಲು ೨ ಗಂಟೆಗಳ ಕಾಲವಾದರೂ ಬೇಕಾಗುತ್ತದೆ. ಆದ್ದರಿಂದ ಎಲ್ಲರೂ ಹತ್ತತ್ತು ನಿಮಿಷಗಳ ಕಾಲ ಮಾತನಾಡಬೇಕೆಂದು ಕೇಳಿಕೊಳ್ಳುತ್ತೇನೆ.

> "The speaker may in cases not specifically provided for in the rules and having regard to the state of business before the House and the nature of the motion prescribed time limit on the speeches of the motion."

ಆದ್ದರಿಂದ ಹತ್ತು ನಿಮಿಷಗಳಿಗಿಂತ ಹೆಚ್ಚು ಕಾಲ ಯಾರೂ ಮಾತನಾಡಬಾರದು. ಈಗ ಮಾನ್ಯ ಇದಿನಬ್ಬನವರು ಚರ್ಚೆ ಪ್ರಾರಂಭ ಮಾಡಬಹುದು.

† ಶ್ರೀ ಬಿ. ಎಂ. ಇದಿನಬ್ಬ (ಉಳ್ಳಾಲ).— ಮಾನ್ಯ ಅಧ್ಯಕ್ಷರೇ. ಈ ದಿಪಕ್ಷ ಸಾರಿಗೆ ಮತ್ತು ಸಮಾಜ ಕಲ್ಯಾಣ ಇಲಾಖೆಗಳ ಬೇಡಿಕೆಗಳು ಸದನದ ಮುಂದಿವೆ. ನಾನು ಸಾರಿಗೆ ಇಲಾಖೆ ಬೇಡಿಕೆಗಳ ಮೇಲೆ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಅಪೇಕ್ಷೆ ಪಡುತ್ತಿದ್ದೇನೆ. ಈಗ ಸಭೆಯ ಮುಂದೆ

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ವೆಂದು ಸೂಚಿಸುತ್ತದೆ.